ಹೇಳಿಕೊಂಡಿದ್ದೀರಿ. ಹೀಗೆ ನೀವು ಹೇಳೋದೆ ಒಂದು; ಇಲ್ಲಿ ಚರ್ಚೆಯಾಗುವುದೇ ಒಂದು ಆದರೆ, ಇದು ಪ್ರಿವಿಲೇಜ್ ಆಗುವುದಿಲ್ಲ ಅಂತ ಮಾನ್ಯ ಪ್ರಕಾಶ್ ಹೇಳುತ್ತಾರಲ್ಲಾ ಅದು ಹೇಗೆ? ಸದನ ನಡೆಯದಿದ್ದರೆ ಆ ಮಾತು ಬೇರೆ, ಸದನ ನಡೆದಾಗ ಅದೂ ಚರ್ಚೆಗೆತ್ತಿಕೊಂಡಾಗ, ಇನ್ನೂ ಅನೇಕರು ಆ ವಿಷಯ ಮಾತನಾಡುವಾಗ ನೀವು ಈ ರೀತಿ ಅದನ್ನು ತೆಗೆದುಕೊಳ್ಳುತ್ತೀರಿ ಅಂದರೆ ನಿಜವಾಗಲೂ you are arguing a very bad case. You are a good lawyer. ನನಗೆ ಗೊತ್ತಿದೆ, ಒಳ್ಳೆಯ ವಕೀಲರಿದ್ದೀರಿ ಸಂಸದೀಯಪಟು ಇದ್ದೀರಿ, ಚೆನ್ನಾಗಿ ಮಾತನಾಡುತ್ತೀರಿ, ಅನೇಕ ಕೇಸ್‌ಲಾಗಳನ್ನು ರೆಫರ್ ಮಾಡಿದಿರಿ ಆದರೆ ಇದಕ್ಕೆ ನಿಮ್ಮ ಕೇಸ್‌ಲಾಗಳು ಅಪ್ಲಿಕಬಲ್ ಆಗುವುದಿಲ್ಲ. ಈ ಕೇಸಿಗೆ ನಿಮ್ಮ ವಾದ ಸತ್ಯಕ್ಕೆ ದೂರವಾದದ್ದು. ಅದಕ್ಕೆ ದಯವಿಟ್ಟು ತಾವು ಇದನ್ನು ಅಕ್ಸೆಪ್ಟ್ ಮಾಡಬೇಕು, ಇದನ್ನು ಪ್ರಿವಿಲೇಜ್ ಸಮಿತಿಗೆ ರೆಫರ್ ಮಾಡಿ; ಇದು ವೆರಿ ಸೀರಿಯಸ್, ನೀವೇ ಹೇಳಿ ಚರ್ಚೆ ಮಾಡುವಾಗ ಸುಪ್ರೀಂಕೋರ್ಟಿಗೆ ಹೋಗಿ ಫೈಲ್ ಮಾಡಬಹುದು ಇಲ್ಲಿ ಹೇಳಿಕೆ ಮಾಡುವುದಿಲ್ಲ ಅಂದರೆ...

**ಶ್ರೀ ಹೆಚ್.ಡಿ. ಬಸವರಾಜು** : ಅಧ್ಯಕ್ಷರೇ, ಇಲ್ಲಿ ಬರೀ ನಿಮ್ಮದೇ ಆಯ್ತು ನಮ್ಮ ಜಿಲ್ಲೆಯಲ್ಲಿ ಅಧಿಕವಾದ ಮಳೆ ಬಂದು ನಾವಲ್ಲಿ ಒದ್ದಾಡುತ್ತಿದ್ದೇವೆ ನಮಗೆ ಪರಿಹಾರ ಘೋಷಣೆ ಮಾಡಬೇಕು.

**(ಗೊಂದಲ)**

ಅಧ್ಯಕ್ಷರೇ, ಬೆಳಿಗ್ಗೆನೇ ತಮ್ಮ ಕಚೇರಿಗೆ ಬಂದು ಕೊಡಗು ಜಿಲ್ಲೆಯಲ್ಲಿ ಮಳೆಹಾನಿಯಿಂದ ಒಂದು ಕುಟುಂಬ ಸಂಪೂರ್ಣ ನಿರ್ನಾಮವಾಗಿದೆ, ಅದಕ್ಕೆ ಪರಿಹಾರ ಘೋಷಣೆ ಮಾಡಬೇಕು, ಎಂದು ವಿನಂತಿ ಮಾಡಿಕೊಂಡಿದ್ದೇನೆ. ಇನ್ಯಾವಾಗ ನಾವು ಮಾತನಾಡುವುದು? ಅವರು ಮಾತನಾಡುತ್ತಲೇ ಇರುತ್ತಾರೆ, ಅವರಿಗೆ ಅವಕಾಶ ಕೊಡಿ. ನಾನಲ್ಲದೆ ನನ್ನ ಜಿಲ್ಲೆ ಸಮಸ್ಯೆ ಯಾರು ಮಾತನಾಡುವುದು? ಈ ತರಹ ಆದರೆ ಸಾಧ್ಯಾನೇ ಇಲ್ಲ, ತಾವೂ ಯೋಚಿಸಿ ಬರೀ ಬಿಎಂಐಸಿನ ಅಥವಾ ಜಿಲ್ಲಾ ಸಮಸ್ಯೆನಾ?

**ಅಧ್ಯಕ್ಷರು** : ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದಾರೆ. ಈ ತರಹ ನೀವು ಕೂಗಾಡುವುದು ಸರಿಯಲ್ಲ. ಪ್ರಿವಿಲೇಜ್ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಿ. ದಯಮಾಡಿ ಸಹಕರಿಸಿ. ಅವರು ಹೇಳುವುದನ್ನೂ ಕೇಳಬೇಕಲ್ಲ.

**ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ** : ನಿಮ್ಮ ಮುಂದೆ ನಾನಿದನ್ನು ಪ್ರಸ್ತಾಪಿಸಿದ್ದೇನೆ.

(ಈ ಹಂತದಲ್ಲಿ ಮಾನ್ಯ ಬಸವರಾಜು ಅವರು ಧರಣಿ ಪ್ರಾರಂಭಿಸಿದರು)

(ಗೊಂದಲ)

**ಶ್ರೀ ಎಂ.ಪಿ. ಪ್ರಕಾಶ್** : ಎಷ್ಟೇ ಗುರುತರವಾದಂಥ ಸಮಸ್ಯೆ ನೀವು ಎತ್ತಿ ಈ ತರಹ ನಡೆದುಕೊಂಡರೆ ನಾವು ಸರ್ಕಾರ ನಡೆಸಲು ಆಗುವುದಿಲ್ಲ. ದಯಮಾಡಿ ತಮ್ಮ ಆಸನಕ್ಕೆ ಹೋಗಿ.

**ಅಧ್ಯಕ್ಷರು** : ನೀವು ಹಿರಿಯ ಸದಸ್ಯರು, ಸಹಕರಿಸಿ.

(ಮಾನ್ಯ ಬಸವರಾಜು ಅವರು ಧರಣಿ ಅಂತ್ಯಗೊಳಿಸಿದರು)

**ಶ್ರೀ ಎಂ.ಪಿ. ಪ್ರಕಾಶ್** : ಅಧ್ಯಕ್ಷರೇ, ಒಂದು ವಿಷಯವನ್ನು ಎತ್ತಿಕೊಂಡಾಗ ಅಧ್ಯಕ್ಷರು ಅದಕ್ಕೊಂದು ಉತ್ತರ ಕೊಟ್ಟು ಅದು ಪರಿಸಮಾಪ್ತಿಯಾಗುವವರೆಗೂ ಮತ್ತೊಬ್ಬರು ಎಂಥದ್ದೇ ಗುರುತರ ಸಮಸ್ಯೆ ಇದ್ದರೂ ಕೂಡ ನಂತರ ಅವರ ಒಪ್ಪಿಗೆ ಪಡೆದು ಎತ್ತಬೇಕಾಗುತ್ತದೆ. ಎಲ್ಲರಿಗೂ ನೋವುಗಳಿವೆ. ತಾವೇನು ಕೊಡಗಿನ ವಿಚಾರದಲ್ಲಿ ಎತ್ತಿದ್ದೀರಿ, ಅದಕ್ಕೆ ಸಂಪೂರ್ಣ ಸ್ವಾಗತವಿದೆ. ಆದರೆ ತಮ್ಮ ಸಮಸ್ಯೆ ಇದೆ ಅಂತ ಎಲ್ಲರೂ ಭಾವಿಗೆ ಬರುವುದಾದರೆ, ನಡವಳಿಕೆಗಳಿಗೆ ಅಡ್ಡಿ ಆತಂಕ ಉಂಟು ಮಾಡಿದರೆ ಅಧ್ಯಕ್ಷರಿಗಾಗಲಿ ನನಗಾಗಲಿ ಇದನ್ನು ನಡೆಸಿಕೊಂಡುಹೋಗಲು ಕಷ್ಟವಾಗುತ್ತದೆ. ನಾನೇನೂ ದೊಡ್ಡ ಉಪದೇಶವನ್ನು ಮಾಡುತ್ತೇನೆಂದು ಹೇಳಿ ತಾವು ಭಾವಿಸಿಕೊಳ್ಳಬಾರದು. ನಿಮ್ಮದು ಬಹಳ ಗುರುತರವಾದಂಥ ಸಮಸ್ಯೆ ಇದೆ ಆದರೆ ಇದಕ್ಕಾಗಿ ಕಾಯಬೇಕು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಒಂದು ಪ್ರಶ್ನೆಗೆ ಉತ್ತರವನ್ನು ನಾವು ಕೊಡತ್ತೇವೆ. ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ. ಅಧ್ಯಕ್ಷರು ಇದರ ಬಗ್ಗೆ ಅಂತಿಮ ತೀರ್ಮಾನ ಕೊಡುತ್ತಾರೆ. ತೀರ್ಮಾನ ಆದಮೇಲೆ ಎಲ್ಲಾ ಸದಸ್ಯರು ತಮ್ಮ ತಮ್ಮ ಸಮಸ್ಯೆಗಳನ್ನು ಎತ್ತಬಹುದು.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ಮಾನ್ಯ ಅಧ್ಯಕ್ಷರೇ, ನಾನು ಮುಗಿಸುತ್ತಿದ್ದೆ. ಮಾನ್ಯ ರಮೇಶ್‌ಕುಮಾರ್‌ರವರು ಎದ್ದಿದ್ದರಿಂದ ನಾನು ಕೂತೆ. ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಕೇವಲ ಪತ್ರಿಕೆ ಆಧಾರದಮೇಲೆ ಇದನ್ನು ಕೊಟ್ಟಂಥದ್ದಲ್ಲ. ಅವರಿಗೂ ಗೊತ್ತಿದೆ. ಇವತ್ತು ಸುಪ್ರೀಂ ಕೋರ್ಟಿನಲ್ಲಿ ಆ ರಿವ್ಯೂ ಪಿಟಿಷನನ್ನು ಹಾಕಿದ್ದಾರೆ. ಮತ್ತು ಅವರೇ ಕೂಡ ರುಜುವಾತು ಮಾಡಬಹುದು. ನಿಮ್ಮಲ್ಲಿ ಅದು ಇಲ್ಲವೆಂದು ತಕ್ಷಣವೇ ಆ ಫ್ಯಾಕ್ಟ್ ಇಲ್ಲ ಅಂತ ಅಲ್ಲ. The facts stands that the Review Petition is already filed before the Supreme Court. It is a fact. ಅದನ್ನು ಡಿನೈ ಮಾಡುತ್ತೀರಾ? ಅದು ಯಾವಾಗ ಡಿನೈ ಮಾಡುವುದಿಲ್ಲ ಅಂದಾಗ ಅದು ಸತ್ಯ. ಅದಕ್ಕಾಗಿ ತಾವು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ. ಇನ್ನು ಡೀಟೈಲ್ಸ್ ಹೇಳುವುದಕ್ಕೆ ಅವಕಾಶವನ್ನು ಕೊಟ್ಟರೆ ಬೇಕಾದರೆ ಎಲ್ಲಾ ಹೇಳಿಬಿಡೋಣ. ಆದರೆ ಒಂದೇ ಒಂದು